ಗಂಗಾವತಿ ಸಿಂಧನೂರಿಂ ಕಂಷ್ಟಗಿ ತಾಲ್ಲೂಕಿನಲ್ಲಿರುವ ವೈದ್ಯರ ಹುದ್ದೆಗಳ ಸಂಖ್ಯೆ

೯೦೪ (೧೬೦೬) ಶ್ರೀ ಎಂ. ಮಲ್ಲಿಕಾರ್ಜುನ (ಕನಕಗಿರಿ).— ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಗಂಗಾವತಿ ಸಿಂಧನೂರು ಕುಷ್ಟಗಿ ತಾಲ್ಲೂಕಿನಲ್ಲಿರುವ ವೈದ್ಯರ ಹುದ್ದೆಗಳ ಸಂಖ್ಯೆ ಎಷ್ಟು ?

ಆ) ಅವುಗಳಲ್ಲಿ ಭರ್ತಿ ಮಾಡಿದ ಹುದ್ದೆಗಳ ಸಂಖ್ಯೆ ಎಷ್ಟು ?

ಇ) ಉಳಿದ ಹುದ್ದೆಗಳನ್ನು ಭರ್ತಿ ಮಾಡದೆ ಇರಲು ಕಾರಣವೇನು ?

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಮಂತ್ರಿಗಳು).—

ಅ) ೩೩

ಆ) ೨೪

ಇ) ಉಳಿದ ೯ ಹುದ್ದೆಗಳನ್ನು ವೈದ್ಯರ ಅಭಾವದಿಂದ ತುಂಬಿಲ್ಲ.

ಬಸವಕಲ್ಯಾಣ ತಾಲ್ಲೂಕಿನಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಘಟಕಗಳ ಸಂಖ್ಯೆ

೯೦೫ (೧೬೨೬) ಶ್ರೀ ಬಸವರಾಜಪಾಟೀಲ ಅಟ್ಟೂರ (ಬಸವ ಕಲ್ಯಾಣ). ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಬಸವಕಲ್ಯಾಣ ತಾಲ್ಲೂಕಿನಲ್ಲಿರುವ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಪ್ರಾಥಮಿಕ ಆರೋಗ್ಯ ಘಟಕಗಳ ಒಟ್ಟು ಸಂಖ್ಯೆ ಎಷ್ಟು ?

ಆ) ಯಾವ ಯಾವ ಗ್ರಾಮಗಳಲ್ಲಿ ಈ ಕೇಂದ್ರಗಳಿವೆ?

ಇ) ಪ್ರತಿಕೂಡ ಪ್ರಾಥಮಿಕ ಆರೋಗ್ಯ ಘಟಕ. ಉಜಳೂರು, ಪೂಳಾಳ, ಬಸವಕಲ್ಯಾಣ ಆಸ್ಪತ್ರೆಗಳಲ್ಲಿ ಎಷ್ಟು ವೈದ್ಯರನ್ನು ನೇಮಿಸಿದ್ದೀರಿ?

ಈ) ಖಾಲಿ ಇರುವ ಸ್ಥಳಗಳಿಗೆ ವೈದ್ಯರನ್ನು ಯಾವಾಗ ತುಂಬಲಾಗುವುದು?

ಶ್ರೀಮತಿ ಮನೋರಮಾ ಮಧ್ವರಾಜ್ (ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಸಚಿವೆಯರು).—

ಅ) ಒಟ್ಟು ಸಂಖ್ಯೆ : ೧೦

ಪ್ರಾಥಮಿಕ ಆರೋಗ್ಯ ಕೇಂದ್ರಗಳು : ೭

ಪ್ರಾಥಮಿಕ ಆರೋಗ್ಯ ಘಟಕಗಳು ; ೩

ಆ) ಪ್ರಾಥಮಿಕ ಆರೋಗ್ಯ ಕೇಂದ್ರ ;

೧. ಹಲಸೂರು
೨. ಪೂತಾಳ
೩. ಉಜಳಾಂಬ
೪. ಕೋಹಿನೂರ
೫. ಮಚಲಾಯ
೬. ರಾಜೇಶ್ವರ
೭. ಮುಡ್ಡಿ

ಪ್ರಾಥಮಿಕ ಆರೋಗ್ಯ ಘಟಕ :

೧) ಫೋಟಾಳ
೨) ಹರಕೋಡ
೩) ಬೆಲ್ಲೂರ